ಮೂಲ ದಾವಾ ನಂಃ 98/2018
ಡಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **10-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ವಿ.ಎಸ್. ವಕೀಲರಿಂದಃ**

ದಾವಾ ಸ್ಥಳದ ಸ.ನಂಃ 456 ಹಿಸ್ಸಾ 2ಬ ಆಗಿರುತ್ತದೆ. ದಾವಾ ಸ್ಥಳದ ಚತುರ್ಗಡಿ ನನಗೆ ಗೊತ್ತಿರುತ್ತದೆ. ದಾವಾ ಸ್ಥಳದ ಪೂರ್ವಕ್ಕೆ ಸ.ನಂಃ 405 ಹಿಸ್ಸಾ ಅ1, ಉತ್ತರ ದಿಕ್ಕಿಗೆ ಸ.ನಂಃ 455, ದಕ್ಷಿಣ ದಿಕ್ಕಿಗೆ ಸ.ನಂಃ 458, ಬರುತ್ತದೆ, ಆದರೆ ಪಶ್ಚಿಮ ದಿಕ್ಕಿನ ಗಡಿ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ಥಳವು ದಕ್ಷಿಣ ಬದಿಗೆ ತಗ್ಗು ಪ್ರದೇಶವಾಗಿದ್ದು, ಉತ್ತರ ದಿಕ್ಕಿಗೆ ಏರಿನಿಂದ ಕೂಡಿದೆ. ದಾವಾ ಸ್ಥಳದ ಹೆಚ್ಚಿನ ಕ್ಷೇತ್ರ ಭಾಗಾಯತ್ ಆಗಿದೆ ಎಂದರೆ ಸರಿ. ಗೇರುಸೊಪ್ಪ ರಸ್ತೆಯಿಂದ ಹೊಸಮಠ ರಸ್ತೆಯು ನನ್ನ ಸ.ನಂಃ 458ರವರೆಗೆ ಬರುತ್ತದೆ. ಈ ರಸ್ತೆಯನ್ನು ನಾನು ನನ್ನ ಕ್ಷೇತ್ರದಲ್ಲಿ ಬಂದ್ ಮಾಡಲು ಮುಂದಾಗಿದ್ದರಿಂದ, ವಾದಿಯು ಅಸಿಸ್ಟಂಟ್ ಕಮೀಷನರ್ ರವರಿಗೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಪ್ರಕರಣದಲ್ಲಿ ಹಾಜರಾಗಿ ನಾನು ಜವಾಬನ್ನು ನೀಡಿದ್ದೆನು ಎಂದರೆ ಸರಿ. ದಾವಾ ಸ್ಥಳದ ಉತ್ತರ ಗಡಿಗೆ ಬೇಲಿ ಬರುತ್ತದೆ. ದಾವಾ ಸ್ಥಳದ ಪೂರ್ವ ಗಡಿಗೆ ಒಂದು ತೋಡು ಬರುತ್ತದೆ. ಸದ್ರಿ ತೋಡಿನ ಮೇಲೆ ಬೇಲಿ ಅಥವಾ ಪಾಗಾರ ಇರುವುದಿಲ್ಲ. ದಾವಾ ಸ್ಥಳದ ಪಶ್ಚಿಮ ಗಡಿಗೆ ಬೇಲಿ ಇರುತ್ತದೆ. ದಾವಾ ಸ್ಥಳದ ದಕ್ಷಿಣ ಗಡಿಗೂ ಸಹ ತೋಡು ಇರುತ್ತದೆ. ಸದ್ರಿ ತೋಡಿನ ಮೇಲೆ ಬೇಲಿ ಇರುತ್ತದೆ.

ನಾನು ನನ್ನ ಉದಾಹರಣೆಯಲ್ಲಿ ದಾವಾ ಸ್ಥಳದ ದಕ್ಷಿಣ ಗಡಿಗೆ ತೋಡು ಹಾಗೂ ಬೇಲಿ ಇರುವುದಾಗಿ ನಮೂದಿಸಿದ್ದೇನೆ. ದಾವಾ ಸ್ಥಳವು ವಾದಿಯ ಮಾಲ್ಕಿ ಹಕ್ಕಿನ ಸ್ಥಳವಾಗಿದ್ದು, ಅದು ವಾದಿಯ ಕಬ್ಜಾ ಭೋಗ್ವಟೆಯಲ್ಲಿದೆ ಎಂದರೆ ಸರಿ. ಸ.ನಂಃ 458 ಹಿಸ್ಸಾ 2 ಕ್ಷೇತ್ರ ನನ್ನದಾಗಿರುತ್ತದೆ. ದಾವಾ ಸ್ಥಳದಿಂದ ನನ್ನ ಕ್ಷೇತ್ರವು ಸುಮಾರು 4-5 ಫೂಟ್ ತಗ್ಗು ಪ್ರದೇಶದಲ್ಲಿ ಇದೆ. ನನ್ನ ಸ್ಥಳ ಸ.ನಂಃ 458 ಹಿಸ್ಸಾ 2ರ ಕ್ಷೇತ್ರ ತಗ್ಗು ಪ್ರದೇಶದಲ್ಲಿದ್ದುದರಿಂದ, ನಾನು ದಾವಾ ಸ್ಥಳದ ದಕ್ಷಿಣ ಗಡಿಯನ್ನು ಕಡಿಮೆ ಮಾಡಿ ಒತ್ತುವರಿ ಮಾಡಲು ಪ್ರಯತ್ನಿಸಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಗಡಿ ಗುರುತುಗಳ ಬಗ್ಗೆ ನಮ್ಮಲ್ಲಿ ತಕರಾರು ಉಂಟಾಗಿದ್ದರಿಂದ, ನಾನು ವಾದಿಯ ವಿರುದ್ಧ ದೂರನ್ನು ದಾಖಲಿಸಿದ್ದೆನು ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ಸದ್ರಿ ದೂರಿಗೆ ಪೂರಕವಾಗಿ ಮೋಜಣಿಯನ್ನು ಮಾಡಿ ಬಗೆಹರಿಸಿಕೊಳ್ಳುವಂತೆ ಹೇಳಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ನಮ್ಮ ಊರಿನವರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ನಮ್ಮಲ್ಲಿ ಖಾಯಂ ಕೆಲಸಕ್ಕೆ ಬರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರಿಗೆ ಪ್ರಚೋದನೆ ಮಾಡಿ, ನಾನು ದಾವಾ ಸ್ಥಳವನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳದಲ್ಲಿ ಇರುವ ಮನೆಯಲ್ಲಿ ವಾದಿಯೊಬ್ಬರೇ ವಾಸವಾಗಿದ್ದಾರೆ ಎಂದರೆ ಇರಬಹುದು ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ದಾವಾ ಸ್ಥಳದಲ್ಲಿನ ಮಣ್ಣನ್ನು ತೆಗೆಯದಂತೆ ವಾದಿಯು ನನಗೆ ಹೇಳಿದ್ದರಿಂದ, ನಾನು 2 ಮತ್ತು 3 ನೇ ಪ್ರತಿವಾದಿಯರ ಮೂಲಕ ವಾದಿಗೆ ಧಮ್ಕಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ.

ಈ ಹಿಂದೆ ವಾದಿಯು ನನ್ನ ಹಾಗೂ ನನ್ನ ತಂದೆಯ ವಿರುದ್ಧ ಮೂಲದಾವಾ ಸಂಖ್ಯೆಃ 75/2012 ನ್ನು ಹೂಡಿದ್ದರು ಎಂದರೆ ಸರಿ. ದಾವಾ ಸ್ಥಳದಲ್ಲಿ ವಾದಿಯೊಬ್ಬನೇ ವಾಸವಾಗಿದ್ದರಿಂದ ಆತನಿಗೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ದಾವಾ ಸ್ಥಳದ ದಕ್ಷಿಣ ಗಡಿಯನ್ನು ಒತ್ತುವರಿ ಮಾಡಲು ಮುಂದಾಗಿದ್ದರಿಂದ, ವಾದಿಯು ನನ್ನ ಹಾಗೂ

2 ಮತ್ತು 3 ನೇ ಪ್ರತಿವಾದಿಯ ವಿರುದ್ಧ ಈ ದಾವೆಯನ್ನು  ಹೂಡಿದ್ದಾನೆ ಎಂದರೆ ಸರಿಯಲ್ಲ. ವಾದಿಯು ಕೇಳಿದಂತೆ ಡಿಕ್ರಿ ಮಾಡಬೇಕೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.